



# ಕಣಿವೆಯಲ್ಲಿ ಕಾಲ್ನಡಿಗೆ

ಚಿತ್ರ ನೋಡುವಾಗಲೇ ಅಬ್ಬಾ.. ಎಷ್ಟೊಂದು ರಮಣೀಯ ಎನ್ನಿಸುವ ಈ ದೃಶ್ಯ ಸ್ಪೇನ್‌ನ ಮಲಗಾ ಪ್ರದೇಶದ್ದು. ಇಲ್ಲಿಗೆ ಸಮೀಪದ ಎಲ್ ಕೊರೋ–ಅಲೋರದ ಅದ್ಭುತವೆನಿಸುವ ಪರ್ವತ ಕಣಿವೆಯಲ್ಲಿ ನಿರ್ಮಿಸಿದ 'ನ್ಯೂ ಕಾಮಿನಿಟೋ ಡೆಲ್ ರೇ' ಅಂದರೆ ದ ಕಿಂಗ್ಸ್ ಲಿಟ್ಲ್ ಪಾಥ್‌ವೇ ಎಂಬ ಹೆಸರಿನಲ್ಲಿ ಕರೆಯಲ್ಪಡುವ ಈ ರುದ್ರ ರಮಣೀಯ ಕಾಲುದಾರಿ ಇತ್ತೀಚೆಗೆ ಪ್ರವಾಸಿಗರಿಗಾಗಿ ಮತ್ತೆ ತೆರೆದುಕೊಂಡಿದೆ.

ಒಟ್ಟು ಸುಮಾರು 7.7 ಕಿ.ಮೀ ದೂರದ ಈ ಹಾದಿಯು ಸಾಹಸಿ ಪ್ರವಾಸಿಗರ ನೆಚ್ಚಿನ ತಾಣವಾಗಿತ್ತು. ಇದನ್ನು 1901ರಲ್ಲಿ ನಿರ್ಮಿಸಲು ಪ್ರಾರಂಭಿಸಿ 1905ರಲ್ಲಿ ಸಾರ್ವಜನಿಕ ಓಡಾಟಕ್ಕೆ ಮುಕ್ತಗೊಳಿಸಲಾಗಿತ್ತು. 5 ಮಂದಿ ಪ್ರವಾಸಿಗರನ್ನು ಈ ಕಾಲುದಾರಿ ಬಲಿ ಪಡೆದ ಬಳಿಕ 2001ರಲ್ಲಿ ಇದನ್ನು ಮುಚ್ಚಲಾಗಿತ್ತು. ನಂತರ ಸುರಕ್ಷತಾ ಮಾನದಂಡವನ್ನು ಅನುಸರಿಸಿ ಪುನರ್‌ನಿರ್ಮಾಣ ಮಾಡಿ ಮತ್ತೊಮ್ಮೆ ಸಾರ್ವಜನಿಕ ಪ್ರವೇಶಕ್ಕೆ ಅವಕಾಶ ನೀಡಿದ್ದಾರೆ.

ಇಲ್ಲಿಗೆ ಸಮೀಪದ ಎರಡು ಜಲವಿದ್ಯುತ್ ಉತ್ಪಾದನಾ ಘಟಕಕ್ಕೆ ಸುಲಭವಾಗಿ ಕಾರ್ಮಿಕರು ಹೋಗುವಂತೆ ಅನುಕೂಲವಾಗಲು ಈ ಹಾದಿಯನ್ನು ನಿರ್ಮಿಸಿದ್ದಾದರೂ, ಬಳಿಕ ಇಲ್ಲಿನ ಆಕರ್ಷಕ ದೃಶ್ಯ, ಹೆಚ್ಚಿನ ಸಾಹಸಿ ಪ್ರವಾಸಿಗರ ತಾಣವಾಯಿತು. ಒಂದು ಮೀಟರ್ ಅಗಲದ ಈ ಕಾಲುದಾರಿ, ಪ್ರಯಾಣಿಕರಿಗೆ ಮೈ ಜುಮ್ಮೆನ್ನಿಸುವ ಅನುಭವ ನೀಡುತ್ತದೆ. ಈ ದಾರಿಯಲ್ಲಿ ಅಡ್ಡಲಾಗಿ ಹರಿವ ಜಾರ್ಜ್ ಆಫ್ ಜೈಟಾನ್ಸ್ ಸೇತುವೆಯ ಮೇಲೆ ಸುಮಾರು 100 ಅಡಿ ಎತ್ತರದಲ್ಲಿ ಹಾದುಹೋಗುವ ದಾರಿಯಂತೂ ಒಂದು ವಿಶಿಷ್ಟ ಅನುಭವವನ್ನು ನೀಡುತ್ತದೆ ಎಂದು ಪ್ರವಾಸಿಗರು ಹೇಳಿಕೊಂಡಿದ್ದಾರೆ.

ಇದನ್ನು ಪ್ರಪಂಚದ ಭಯಾನಕ ಕಾಲುದಾರಿಗಳಲ್ಲಿ ಒಂದು ಎಂದು ಕರೆಯುತ್ತಾರೆ. ಈ ಹಾದಿಯಲ್ಲಿ ಪ್ರಯಾಣಿಸಲು ಇಚ್ಛಿಸುವವರು ನಿಗದಿತ ಶುಲ್ಕ ಪಾವತಿಸಿ ಸಾಗಬೇಕು. ಹಾಗೆಯೇ ಪ್ರತಿದಿನ ಕೆಲವೇ ಮಂದಿಗೆ ಮಾತ್ರ ಅವಕಾಶ ನೀಡಿದ್ದಾರೆ. ಕಾಲುದಾರಿ ಸಾಕಷ್ಟು ಗಟ್ಟಿಮುಟ್ಟಾಗಿದ್ದರೂ, ಜನರ ಒತ್ತಡ ನಿಗದಿತ ಪ್ರಮಾಣವನ್ನು ಮೀರಬಾರದು ಎಂಬ ಉದ್ದೇಶದಿಂದ ಈ ನಿರ್ಬಂಧ ಹೇರಲಾಗಿದೆ. ಗುಂಡಿಗೆ ಗಟ್ಟಿಯಿದ್ದರೆ ಸ್ಪೇನ್‌ಗೆ ಹೋದಾಗ ಒಮ್ಮೆ ಇಲ್ಲಿ ಕಾಲೂರಿ ಬರಬಹುದು.

■ ಕಿರಣ್ ಇಜಿಮಾನ್



